ಓ. ಎಸ್ . 58/2018 ಪಿ.ಡಬ್ಲ್ಯೂ - 2 ಶಂಕರ ಮಗದುಮ **(ದಿನಾಂಕಃ 30-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ವಾಟಿ ಸವಾಲು : 5 ಮತ್ತು 6ನೇ ಪ್ರತಿವಾದಿ ಪರ ಶ್ರೀ ಎ ಎಂ ವಿ ವಕೀಲರಿಂದ**

**1.** ನನಗೆ ಈ ಕೇಸಿನಲ್ಲಿ ನ್ಯಾಯಾಲಯದಿಂದ ಸಾಕ್ಷಿ ಹೇಳಲು ಸಮನ್ಸ ಬಂದಿರುವುದಿಲ್ಲ. ಈ ದಿನ ಬಾಳಪ್ಪನ ಮಕ್ಕಳು ನನಗೆ ಸಾಕ್ಷಿ ಹೇಳಲು ಕರೆಸಿರುತ್ತಾರೆ. ಪ್ರತಿವಾದಿ ನಂ. 5 ಮತ್ತು 6 ಇವರ ಪರಿಚಯ ಇರುತ್ತದೆ. ಹೊಸಪೇಟೆ ಗ್ರಾಮದ ಸರ್ವೆ ನಂ. 149 ಇದರ ಒಟ್ಟು ಕ್ಷೇತ್ರ 1 ಎಕರೆ 37 ಗುಂಟೆ ಎಂದರೆ ನಿಜ. ಅದು ಹೊಳೆಪ್ಪ , ಲಕ್ಕಪ್ಪ ಮತ್ತು ಬಾಳಪ್ಪ ಇವರಿಗೆ ಅವರ ಹಿರಿಯರಿಂದ ಬಂದಂತಹ ಜಮೀನು ಎಂದರೆ ನಿಜ. ಬಾಳಪ್ಪನ ಅಕ್ಕತಂಗಿಯರು ತಮ್ಮ ಹಿಸ್ಸೆಯನ್ನು ಮ್ಮ 3 ಜನ ಅಣ್ಣ ತಮ್ಮಂದಿರರಿಗೆ ಬಿಟ್ಟು ಕೊಟ್ಟ ನಂತರ ಅದರಲ್ಲಿ ಹೊಳೆಪ್ಪ , ಲಕ್ಕಪ್ಪ ಮತ್ತು ಬಾಳಪ್ಪ ಇವರ ಹೆಸರು ದಾಖಲ ಆಗಿದೆ ಎಂದರೆ ನಿಜ.

**2.** ದಾವಾ ಜಮೀನಿನಲ್ಲಿ 3 ಜನರಿಗೂ 1/3 ಹಿಸ್ಸಾ ಇದೆ ಎಂದರೆ ನಿಜ. 5 ಮತ್ತು 6 ನೇ ಪ್ರತಿವಾದಿಯರು ಲಕ್ಕಪ್ಪನ ಮಕ್ಕಳು ಎಂದರೆ ನಿಜ. ಲಕ್ಕಪ್ಪ ತೀರಿಕೊಂಡ ನಂತರ 5 ಮತ್ತು 6 ನೇ ಪ್ರತಿವಾದಿಯರು ಲಕ್ಕಪ್ಪನ 1/3 ಹಿಸ್ಸಾಗೆ ಮಾಲೀಕರಾಗಿದ್ದಾರೆ ಎಂದರೆ ನಿಜ. ಲಕ್ಕಪ್ಪನ 1/3 ಹಿಸ್ಸಾದಲ್ಲಿ 5 ಮತ್ತು 6 ನೇ ಪ್ರತಿವಾದಿಯರಿಗೆ ತಲಾ ಅರ್ಧ ಹಿಸ್ಸಾ ಇದೆ ಎಂದರೆ ನಿಜ. ಪ್ರತಿವಾದಿ ನಂ. 5 ಇವರ 12 ಗುಂಟೆ 8 ಆಣೆ ಜಮೀನಿನ ಪೂರ್ವಕ್ಕೆ ಪ್ರತಿವಾದಿ ನಂ. 6 ಇವರ 12 ಗುಂಟೆ 8 ಆಣೆ ಜಮೀನು ಇದೆ ಎಂದರೆ ಸಾಕ್ಷಿ ಪಾಲೇ ಆಗಿಲ್ಲ ಇನ್ನೂ ಬೀಳ (ಫಡ ಜಮೀನು) ಇದೆ ಎಂದು ಹೇಳುತ್ತಾರೆ. 5ನೇ ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ಕಾಡಪ್ಪ ಹೊಳೆಪ್ಪ ಹುಗ್ಗಿ ಈತನ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಆ ಜಮೀನುಗಳು ಇನ್ನೂ ಪಾಲ ಆಗಿಲ್ಲ ಎಂದು ಹೇಳುತ್ತಾರೆ. ಆ ಜಮೀನು ಪಾಲು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಲಗಮಾ ಹುಗ್ಗಿ ಈತ ತೀರಿಕೊಂಡ ನಂತರ ಆತನ ಮೂರು ಜನ ಗಂಡು ಮಕ್ಕಳು ಪಾಲು ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಆ ಪ್ರಕಾರ ಆ 3 ಜನ ತಮ್ಮ ತಮ್ಮ ಹಿಸ್ಸಾವನ್ನು ಸಾಗುವ ಮಾಡಿಕೊಂಡು ಬಂದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

**3.** ಇಂದ್ರಾವತಿ ಮತ್ತು ವಂದನಾ ತಮ್ಮ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನಿಜ. ಇಂದ್ರಾವತಿ ಮತ್ತು ವಂದನಾ ಇಬ್ಬರೂ ಸೇರಿ ಪ್ರತಿವಾದಿ ನಂ. 11 ಮತ್ತು 12 ಇವರಿಗೆ ತಮ್ಮ ಹಿಸ್ಸಾದ 25 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಪ್ರತಿವಾದಿ ನಂ. 11 ಇವರು ನನಗೆ ಗೊತ್ತಿಲ್ಲ. ಆತನು ಶಿಂಧಿಹಟ್ಟಿ ಗ್ರಾಮದವನು ಎಂದರೆ ನಿಜ. ನಾನೂ ಸಹ ಶಿಂಧಿಹಟ್ಟಿ ಗ್ರಾಮದವನು ಎಂದರೆ ನಿಜ. ಅದೇ ರೀತಿ 12 ನೇ ಪ್ರತಿವಾದಿ ಸಹ ಶಿಂಧಿಹಟ್ಟಿ

ಗ್ರಾಮದವನು ಎಂದರೆ ನಿಜ. ಒಂದೇ ಊರಿನವರು ಇದ್ದುದ್ದರಿಂದ ನನಗೆ ಮಾಹಿತಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅವರುಗಳು ಖರೀದಿಗೆ ತೆಗೆದುಕೊಂಡ ವಿಚಾರ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ಜನ ಅಣ್ಣ ತಮ್ಮಂದಿರರು ತಮ್ಮ ಹಿಸ್ಸಾವನ್ನು ಪ್ರತ್ಯೇಕ ಸಾಗು ಮಾಡಿಕೊಂಡು, ಪ್ರತ್ಯೇಕ ಕಬ್ಜಾ ಇಟ್ಟುಕೊಂಡ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 11 ಮತ್ತ 12ನೇ ಪ್ರತಿವಾದಿಗಳು ತಾವು ಖರೀದಿ ಮಾಡಿದ ಜಮೀನಿನ ಮೇಲೆ ಸಾಗು ಮಾಡಿಕೊಂಡು ಬೆಳೆ ಬೆಳೆಯುತ್ತಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 11ನೇ ಪ್ರತಿವಾದಿ ಮತ್ತು ನಮ್ಮ ನಡುವೆ ತಂಟೆ ತಕರಾರು ಇತ್ತು ಎಂದರೆ ಸರಿಯಲ್ಲ. ಅದೇ ವಿಚಾರ ಇಟ್ಟುಕೊಂಡು ನಾನು ಆತನಿಗೆ ತೊಂದರೆ ಮಾಡಬೇಕೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ವಾಟ್ನಿ ಆಗಿಲ್ಲ ಅದು ಬೀಳ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಕ್ಕ ನನ್ನ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ ಎಲ್ಲಾ ವಿಚಾರಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಸರ್ವೆ ನಂಬರ ಹೇಳಿ ಬರೆಸಿಲ್ಲ .

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**